ಸಿ. ಸಿ. ನಂ.- **328/2018**

ಡಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **13-08-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರದ ಕಾರಣ ಶ್ರೀ ಎನ್.ಎಂ.ಎಸ್. ವಕೀಲರನ್ನು ತರ್ಜುಮೆ ಗಾರರನ್ನಾಗಿ ನೇಮಿಸಿ, ಅವರಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸದರಿಯವರು ಕನ್ನಡ ಭಾಷೆ ಯಿಂದ ಹಿಂದ ಭಾಷೆಗೆ ಸಾಕ್ಷಿಗೆ ಪ್ರಶ್ನೆಗಳನ್ನು ತರ್ಜುಮೆ ಮಾಡಿ ಅವರು ಹೇಳಿದ ಉತ್ತರವನ್ನು ಕನ್ನಡ ಭಾಷೆಗೆ ಇದ್ದಂತೆ ಅನುವಾದಿಸುತ್ತೇನೆಂದು ನುಡಿದಿರುತ್ತಾರೆ.

<u>ಪಾಟೀ ಸವಾಲು- ಫಿರ್ಯಾದಿ ಪರ ವಕೀಲರಾದ ಶ್ರೀ ಕೆ.ಎಸ್.ಎಂ. ರವರಿಂದ -</u>

ನಾನು 17 ನೇ ವಾರ್ಡ್ ಎಸ್.ಆರ್.ನಗರದಲ್ಲಿ ವಾಸ ಮಾಡುತ್ತೇನೆ, ನನಗೆ ರೆಹನಾ ಬಾಷಾ ರವರ ಪರಿಚಯ ವೈಯಕ್ತಿಕವಾಗಿಲ್ಲ ಇಲ್ಲ, ಆದರೆ ನನ್ನ ಗಂಡನಿಂದ ಅವರ ಪರಿಚಯ ಇದೆ. ದಿನಾಂಕಃ **09.02.2016** ರಂದು ರೂ.**22,50,000/-** ಮೊತ್ತಕ್ಕೆ ರೆಹನಾ ರವರ ಮಾಲೀಕತ್ವದಲ್ಲಿ ಇದ್ದ ಪ್ಲಾಟ್ ಅನ್ನು ನಾನು ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಮುಂಗಡ ಪಾವತಿಯಾಗಿ ರೂ.**4,50,000/-** ವನ್ನು ನಾನು ರೆಹನಾ ಬಾಷಾರವರಿಗೆ ಕೊಟ್ಟಿದ್ದೆ ಎಂದರೆ ಸರಿ. ಸಾಕ್ಷಿಗೆ ಸದರಿ ಕ್ರಯ ಪತ್ರದ ನೋಟರೈಜ್ ಪ್ರತಿಯನ್ನು ಎದುರು ತೋರಿಸಿದಾಗ ಅವರು ಈ ಕ್ರಯಪತ್ರದ ಮುಖಾಂತರ ಈ ಮೇಲೆ ಹೇಳಿದ ಪ್ಲಾಟ್‌ಅನ್ನು ಖರೀದಿ ಮಾಡಿರುತ್ತೇನೆ ಎಂದು ಒಪ್ಪಿದ್ದರಿಂದ ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಈ ರೀತಿ ಖರೀದಿ ಮಾಡುವ ಸಮಯದಲ್ಲಿ ಈ ಪ್ಲಾಟ್‌ಗೆ ಸಂಬಂದಪಟ್ಟ ದಾಖಲೆಗಳನ್ನು ನೋಡಿರುತ್ತೀರೆ ಎಂದರೆ ಸಾಕ್ಷಿಯು ಅವರು ನನಗೆ ಮನೆ ಮಾರಾಟ ಮಾಡುತ್ತೇನೇ ಎಂದು ಹೇಳಿದ್ದರು ಆದರೆ ಮೋಸ ಮಾಡಿ ಪ್ಲಾಟ್‌ಅನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.8 ಕ್ರಯ ಪತ್ರವನ್ನು ಬ್ಯಾಂಕ್ ನಲ್ಲಿ ಅಡ ಇಟ್ಟು ರೂ. **22,50,000/-** ಮೊತ್ತವನ್ನು ಸಾಲವನ್ನಾಗಿ ಪಡೆದಿರುತ್ತೀರಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ರೆಹನಾರವರ ಗಂಡ ಸಾಲ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ . ಓರಿಯಂಟಲ್ ಬ್ಯಾಂಕ್ ಆಪ್ ಕಾಮರ್ಸ್ ನಲ್ಲಿ ಸಾಲಕ್ಕಾಗಿ ನಾನೇ ಖುದ್ದಾಗಿ ಅರ್ಜಿ ಸಲ್ಲಿಸಿರುತ್ತೇನೇ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ರೆಹನಾ ರವರ ಗಂಡ ಅರ್ಜಿ ಸಲ್ಲಿಸಿರುತ್ತಾರೇ ಎಂದು ನುಡಿಯುತ್ತಾರೆ. ನಾನೇ ಖುದ್ದಾಗಿ ಸಾಲದ ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ಸಾಕಿಷ್ಷಿ ಮುಂದುವರೆದು ರೆಹನಾ ರವರ ಗಂಡ ರವರೇ ಎಲ್ಲಾ ನೋಡಿಕೊಂಡಿರುತ್ತಾರೆ

ಎಂದು ನುಡಿಯುತ್ತಾರೆ. ಹೀಗೆ ಪಡೆದ ಸಾಲದ ಕೆಲವು ಕಂತುಗಳನ್ನು ನಾನು ಕಟ್ಟಿರುತ್ತೇನೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾನು ಮನೆ ಖರೀದಿ ಮಾಡಿದ ಸಾಲಕ್ಕೆ ಕಂತನ್ನು ಕಟ್ಟಿರುತ್ತೇನೆ, ಪ್ಲಾಟ್ ಖರೀದಿಗೆ ಅಲ್ಲ ಎಂದು ನುಡಿಯುತಾತರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.